# ಸ್ವಾತಂತ್ರ್ಯ ಹೋರಾಟಗಾರರ ವೀರಸೌಧ ಕಟ್ಟಡ ಸಮಿತಿ (ಸಮುದಾಯ ಭವನ)

**ಸಂಪರ್ಕಿಸಬೇಕಾದ ವಿಳಾಸ : ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು**

ಬೆಳಗುಂಬ ರಸ್ತೆ, ತುಮಕೂರು – 572 103, ದೂರವಾಣಿ ಸಂಖ್ಯೆ 0816–2272280

**email : tudatmk2009@yahoo.co.in, website : tuda.co.in.**

ಕ್ರಮಾಂಕ ಟಿಯುಡಿಎ/ವೀರಸೌಧ/ಮಳಿಗೆ ಹರಾಜು/01/2012–13 **ಪ್ರಕಟಣೆ** ದಿನಾಂಕ : 02–07–2012

## ಪ್ರಕಟಣೆ

ಸ್ವಾತಂತ್ರ್ಯ ಹೋರಾಟಗಾರರ ಸಂಘವು ವೀರಸೌಧ ಕಟ್ಟಡದ ಸಮುದಾಯ ಭವನದಲ್ಲಿ ನಿರ್ಮಿಸಿರುವ ಈ ಕೆಳಕಾಣಿಸಿದ ವಾಣಿಜ್ಯ ಮಳಿಗೆಗಳನ್ನು **ಮಾಸಿಕ ಪ್ರೀಮಿಯಂ ಆಧಾರದ ಮೇಲೆ** ವಿಲೇಪಡಿಸಲು ಉದ್ದೇಶಿಸಿದ್ದು, ದಿನಾಂಕ 31–07–2012ರೊಳಗಾಗಿ ಕಛೇರಿಯನ್ನು ಭೇಟಿ ಮಾಡಿ ಅರ್ಜಿ ಸಲ್ಲಿಸಿಕೊಳ್ಳಬಹುದಾಗಿದೆ.

| ಕ್ರಮ ಸಂಖ್ಯೆ | ಮಳಿಗೆಗಳ ವಿವರಗಳು | ಮಳಿಗೆಗಳ ಸಂಖ್ಯೆ | ಅಳತೆಗಳು | | | | ವಿಸ್ತೀರ್ಣ ಚ.ಮೀ.ಗಳಲ್ಲಿ |
|---|---|---|---|---|---|---|---|
| | | | ಪೂರ್ವ | ಪಶ್ಚಿಮ | ಉತ್ತರ | ದಕ್ಷಿಣ | |
| 1 | C1, C2, C3, C4, C7, C8 | 6 | 4.20 | 4.20 | 3.10 | 3.10 | **13.02** |
| 2 | G2, G3, G5, G6 | 4 | 4.20 | 4.20 | 3.10 | 3.10 | **13.02** |

**ಹರಾಜಿನ ವಿವರಗಳಿಗಾಗಿ ಪ್ರಾಧಿಕಾರದ website : tuda.co.in ನ್ನು ವೀಕ್ಷಿಸಬಹುದು ಹಾಗೂ ಹೆಚ್ಚಿನ ಮಾಹಿತಿಗಾಗಿ ಪ್ರಾಧಿಕಾರದ ಕಛೇರಿಯನ್ನು ಸಂಪರ್ಕಿಸಬಹುದು**

## ಷರತ್ತುಗಳು

1. ದಿನಾಂಕ 28–04–2012ರಂದು ನಡೆದ ಬಹಿರಂಗ ಹರಾಜಿನಂತೆ ಉಳಿದ ಮಳಿಗೆಗಳನ್ನು ವಿಲೇವಾರಿಗೆ ಕ್ರಮವಹಿಸಲಾಗಿರುತ್ತದೆ. ಎಲ್ಲಾ ಹರಾಜಿನ ಷರತ್ತುಗಳು ಈ ವಿಲೇವಾರಿಗೆ ಅನ್ವಯಿಸುತ್ತವೆ. ನಿಯಮಿತ ಸಂಖ್ಯೆಯಲ್ಲಿ ಅರ್ಜಿಗಳು ಬಂದಲ್ಲಿ ಮೊದಲು ಬಂದವರಿಗೆ ಮೊದಲು ಆಧ್ಯತೆ ಮೇರೆಗೆ ದಿನಾಂಕ 28–04–2012 ಹರಾಜಿನ ಷರತ್ತುಗಳಂತೆ ಮಾಸಿಕ ಪ್ರೀಮಿಯಂ ರೂ.6000, ಮಾಸಿಕ 10 ತಿಂಗಳ ಹಿಂದಿರುಗಿಸಬಹುದಾದ ಮುಂಗಡ ಹಾಗೂ ಹಿಂದಿರುಗಿಸಲಾಗದ ಮುಂಗಡ ರೂ.5.00 ಲಕ್ಷ ಪಡೆದು ವಿಲೇವಾರಿ ಮಾಡಲಾಗುವುದು. ಅರ್ಜಿ ಸಂಖ್ಯೆ ಜಾಸ್ತಿಯಾದಲ್ಲಿ ಹೆಚ್ಚಿನ ಮೊತ್ತದ ಪ್ರೀಮಿಯಂ ನೀಡಲು ಸಿದ್ದವೆಂದು ಅರ್ಜಿಗಳು ಬಂದಲ್ಲಿ ವಿಷಯವನ್ನು ಜಿಲ್ಲಾ ಸಮಿತಿಯಲ್ಲಿ ಮಂಡಿಸಿ, ತೀರ್ಮಾನ ತೆಗೆದುಕೊಳ್ಳಲಾಗುವುದು.
2. ವಾಣಿಜ್ಯ ಮಳಿಗೆಗಳಿಗೆ ಅತ್ಯಂತ ಹೆಚ್ಚಿನ ಬಿಡ್ಡುದಾರರನ್ನು ತಾತ್ಕಾಲಿಕವಾಗಿ ಅಂಗೀಕರಿಸಿ, 12 ವರ್ಷಕ್ಕೆ ಪರವಾನಗಿಯನ್ನು ವೀರಸೌಧದ ಕಟ್ಟಡ ಸಮಿತಿರವರಿಂದ ಮಂಜೂರು ಮಾಡಿಕೊಡಲಾಗುವುದು. ತದನಂತರ ಯಶಸ್ವಿ ಬಿಡ್ಡುದಾರರ ಖರ್ಚಿನಲ್ಲಿ ನೊಂದಣಿ ಮಾಡಿಕೊಡಲಾಗುವುದು ಹಾಗೂ 12 ವರ್ಷಗಳ ನಂತರ ಯಾವುದೇ ತಂಟೆ ತಕರಾರು ಮಾಡದೆ ಮಳಿಗೆಗಳು ಹೇಗೆ ಪಡೆಯಲಾಗಿತ್ತೋ, ಅದೇ ಸ್ಥಿತಿಯಲ್ಲಿ ಮಳಿಗೆಗಳನ್ನು ವೀರಸೌಧದ ಕಟ್ಟಡ ಸಮಿತಿಯ ಸುಪರ್ದಿಗೆ ವಹಿಸಬೇಕು.
3. ಅಂಗೀಕೃತ ಬಿಡ್ಡುದಾರರ ಪ್ರೀಮಿಯಂ ಮುಂಗಡವನ್ನು ಗುತ್ತಿಗೆ ಅವಧಿ ಮುಗಿದ ನಂತರ ಬಡ್ಡಿ ರಹಿತವಾಗಿ ಹಿಂದಿರುಗಿಸಲಾಗುವುದು.
4. ಪ್ರೀಮಿಯಂದಾರರು ಗುತ್ತಿಗೆ ಅವಧಿ ಪೂರ್ಣಗೊಳ್ಳುವ ಮೊದಲೇ ಮಳಿಗೆಯನ್ನು ತೆರವುಗೊಳಿಸಲು ಇಚ್ಚಿಸಿದ್ದಲ್ಲಿ ಮರುಪಾವತಿಯ ಠೇವಣಿಯನ್ನು ಈ ಕೆಳಕಂಡಂತೆ ಪಾವತಿಸಲಾಗುವುದು.
   * ಗುತ್ತಿಗೆದಾರರು 3 ವರ್ಷದೊಳಗೆ ಗುತ್ತಿಗೆ ಅವಧಿಯ ಮಳಿಗೆಯನ್ನು ತೆರವುಗೊಳಿಸಲು ಇಚ್ಚಿಸಿದ್ದಲ್ಲಿ ಮರುಪಾವತಿಯ ಠೇವಣಿಯ ಒಟ್ಟು ಮೊತ್ತದಲ್ಲಿ ಶೇಕಡ 50 ರಷ್ಟನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
   * ಗುತ್ತಿಗೆದಾರರು 3 ರಿಂದ 6 ವರ್ಷದೊಳಗೆ ಗುತ್ತಿಗೆ ಅವಧಿಯ ಮಳಿಗೆಯನ್ನು ತೆರವುಗೊಳಿಸಲು ಇಚ್ಚಿಸಿದ್ದಲ್ಲಿ ಮರುಪಾವತಿಯ ಠೇವಣಿಯ ಒಟ್ಟು ಮೊತ್ತದಲ್ಲಿ ಶೇಕಡ 30 ರಷ್ಟನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
   * ಗುತ್ತಿಗೆದಾರರು 6 ರಿಂದ 9 ವರ್ಷದೊಳಗೆ ಗುತ್ತಿಗೆ ಅವಧಿಯ ಮಳಿಗೆಯನ್ನು ತೆರವುಗೊಳಿಸಲು ಇಚ್ಚಿಸಿದ್ದಲ್ಲಿ ಮರುಪಾವತಿಯ ಠೇವಣಿಯ ಒಟ್ಟು ಮೊತ್ತದಲ್ಲಿ ಶೇಕಡ 20 ರಷ್ಟನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
   * ಗುತ್ತಿಗೆದಾರರು 9 ರಿಂದ 12 ವರ್ಷದೊಳಗೆ ಗುತ್ತಿಗೆ ಅವಧಿಯ ಮಳಿಗೆಯನ್ನು ತೆರವುಗೊಳಿಸಲು ಇಚ್ಚಿಸಿದ್ದಲ್ಲಿ ಮರುಪಾವತಿಯ ಠೇವಣಿಯ ಒಟ್ಟು ಮೊತ್ತದಲ್ಲಿ ಶೇಕಡ 12 ರಷ್ಟನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
5. ವಾಣಿಜ್ಯ ಮಳಿಗೆಗಳ ಅತ್ಯಂತ ಹೆಚ್ಚಿನ ಬಿಡ್ಡುದಾರರು ಶೇಕಡ 35 ರಷ್ಟು ಬಿಡ್ಡು ಮೊಬಲಗನ್ನು ಆ ದಿನವೇ ಪಾವತಿ ಮಾಡಬೇಕು. ಒಂದು ವೇಳೆ ವಿಫಲವಾದಲ್ಲಿ ಠೇವಣಿಗಾಗಿ (ರೂ.10,000) ಪಾವತಿಸಿರುವ ಹಣವನ್ನ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
6. ಉಳಿದ ಪ್ರೀಮೀಯಂ ಮೊತ್ತವನ್ನು (Non refundable) 30 ದಿನಗಳ ಒಳಗಾಗಿ / ಸ್ಥಿರೀಕರಣವಾದ ನಂತರ ಪಾವತಿಸತಕ್ಕದ್ದು, ಯಾವುದೇ ಕಾರಣಕ್ಕೂ ಅವಧಿ ವಿಸ್ತರಿಸುವುದಿಲ್ಲ. ತಪ್ಪಿದಲ್ಲಿ ಹರಾಜು ದಿವಸ ಪಾವತಿಸಿದ ಶೇಕಡ 35 ರಷ್ಟು ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಹಾಗೂ ಸದರಿ ಮಳಿಗೆಗಳ ಮರು ಹರಾಜಿಗಾಗಿ ಅನುಮತಿ ನೀಡಲಾಗುವುದು.
7. ವಾಣಿಜ್ಯ ಮಳಿಗೆಗಳಿಗಾಗಿ ಟೆಂಡರ್ ಜೊತೆಯಲ್ಲಿ ಠೇವಣಿ ಮೊತ್ತ ಪಾವತಿಸಿದ್ದಲ್ಲಿ ಮಾತ್ರ ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಅನುಮತಿ ನೀಡಲಾಗುವುದು. ಬಹಿರಂಗ ಹರಾಜಿನಲ್ಲಿ ಯಶಸ್ವಿಯಾಗದ ಬಿಡ್ಡುದಾರರಿಗೆ ಪಾವತಿಸಿದ ಠೇವಣಿಯನ್ನು ಮರುಪಾವತಿ ಮಾಡಲಾಗುವುದು.
8. ಬಹಿರಂಗ ಹರಾಜಿನ ಯಶಸ್ವಿ ಬಿಡ್ಡುದಾರರಿಗೆ ಮಳಿಗೆ ಗುತ್ತಿಗೆ ಕರಾರು ಆದ ದಿನಾಂಕದಿಂದ ಪರವಾನಗಿ ಶುಲ್ಕವನ್ನು ವಸೂಲಾತಿಗೆ ಪರಿಗಣಿಸಲಾಗುವುದು.
9. ಯಶಸ್ವಿ ಬಿಡ್ಡುದಾರರು ಕಟ್ಟಡದ ಮಳಿಗೆಗಳನ್ನು ವೀರಸೌಧದ ಕಟ್ಟಡ ಸಮಿತಿಯವರ ಸೂಕ್ತ ಅನುಮತಿ ಪಡೆಯದೇ ಬೇರೆ ವ್ಯಕ್ತಿಗಳಿಗೆ ಮರು ಗುತ್ತಿಗೆ (Sub lease) ಮಾಡತಕ್ಕದ್ದಲ್ಲ.
10. ಕಟ್ಟಡದ ಮಳಿಗೆಗಳಲ್ಲಿ ಸ್ಫೋಟಕ ವಸ್ತುಗಳನ್ನು ಮತ್ತು ಮದ್ಯ ಮಾಂಸ ಮಾರಾಟ ಮಾಡಬಾರದು ಹಾಗೂ ಕಾನೂನು ಬಾಹಿರ ವ್ಯಾಪಾರಗಳನ್ನು ಮಾಡಬಾರದು. ಈ ಅಧಿಕಾರನನ್ನು ವೀರಸೌಧದ ಕಟ್ಟಡ ಸಮಿತಿ ಕಾಯ್ದಿರಿಸಿಕೊಂಡಿರುತ್ತೆ. ವ್ಯಾಪಾರ ಪ್ರಾರಂಭಿಸುವ ಮುನ್ನಾ ಪೌರಾಯುಕ್ತರು, ನಗರಸಭೆ, ತುಮಕೂರು ಇವರಿಂದ ಕಾನೂನು ಪ್ರಕಾರ ಉದ್ದಿಮೆ ಪರವಾನಗಿ ಪಡೆದು ಮಳಿಗೆ ಬಳಸಿಕೊಳ್ಳತಕ್ಕದ್ದು. ಈ ದಾಖಲೆಗಳನ್ನು ವೀರಸೌಧ ಕಟ್ಟಡ ಸಮಿತಿಗೆ ನೀಡತಕ್ಕದ್ದು.
11. ಮಂಜೂರಾದ ಮಳಿಗೆಗಳ ಮೇಲೆ ಹೆಚ್ಚುವರಿ ಕಟ್ಟಡ ಕಟ್ಟುವ ಹಕ್ಕನ್ನು ವೀರಸೌಧದ ಕಟ್ಟಡ ಸಮಿತಿ ರವರು ಕಾಯ್ದಿರಿಸಿಕೊಂಡಿರುತ್ತದೆ. ಈ ಬಗ್ಗೆ ಗುತ್ತಿಗೆದಾರರು ಯಾವುದೇ ತಂಟೆ ತಕರಾರು ಮಾಡಲು ಅವಕಾಶವಿರುವುದಿಲ್ಲ.
12. ಹರಾಜು ಪಡೆದು ಮಳಿಗೆಗಳಿಗೆ ಮಾಹೆಯಾನ ವಿದ್ಯುಚ್ಛಕ್ತಿ ಶುಲ್ಕವನ್ನು, ಇತರೇ ಸರ್ಕಾರದ ಶುಲ್ಕಗಳು, ಉದ್ದಿಮೆ ಶುಲ್ಕ ಮುಂತಾದವುಗಳನ್ನು ಗುತ್ತಿಗೆದಾರರು ಪಾವತಿಸಬೇಕು.
13. ಗುತ್ತಿಗೆದಾರನ ಪ್ರತಿ ತಿಂಗಳ ಪ್ರೀಮಿಯಂ ಮೊತ್ತವನ್ನು ಮುಂದಿನ ತಿಂಗಳ 10ನೇ ತಾರೀಖಿನೊಳಗೆ ಪಾವತಿ ಮಾಡದಿದ್ದಲ್ಲಿ ಶೇಕಡ 2 ರಷ್ಟು ಬಡ್ಡಿ ವಿಧಿಸಿ ವಸೂಲಿ ಮಾಡಲಾಗುವುದು. ಒಂದು ವೇಳೆ ಪ್ರೀಮಿಯಂ ಮೊತ್ತವನ್ನು ನಿರಂತರವಾಗಿ 6 ತಿಂಗಳ ಕಾಲ ಪಾವತಿಸದಿದ್ದಲ್ಲಿ ಮಳಿಗೆಯ ಕರಾರು ಪತ್ರವನ್ನು ವಜಾ ಮಾಡಲಾಗುವುದು ಹಾಗೂ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಒಂದು ವೇಳೆ ಗುತ್ತಿಗೆದಾರರು ಮಳಿಗೆಯನ್ನು ಮರು ಗುತ್ತಿಗೆಗೆ ನೀಡಿದ್ದಲ್ಲಿ, ಕರಾರು ಪತ್ರವನ್ನು (ಅಮಾನತ್ತಿನಲ್ಲಿಟ್ಟು) ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಕರಾರು ಪತ್ರವನ್ನು ರದ್ದುಪಡಿಸಲು ಕ್ರಮಕೈಗೊಳ್ಳಲಾಗುವುದು.
14. ಪರವಾನಗಿ ಅವಧಿಯಲ್ಲಿ ಮಾಹೆಯಾನ ಪರವಾನಗಿ ಶುಲ್ಕ ಶೇಕಡ 10 ರಷ್ಟು ಪ್ರತಿ ಮೂರು ವರ್ಷಗಳಿಗೊಮ್ಮೆ ಹೆಚ್ಚಿಸಲಾಗುವುದು ಹಾಗೂ ಈ ಷರತ್ತಿಗೆ ಒಪ್ಪಿ ಒಪ್ಪಂದ ಮಾಡಿಕೊಳ್ಳಬೇಕು ಹಾಗೂ ನೊಂದಣಾಧಿಕಾರಿಗಳ ಕಛೇರಿಯಲ್ಲಿ ಕಡ್ಡಾಯವಾಗಿ ನೊಂದಾಯಿಸಿಕೊಡತಕ್ಕದ್ದು.
15. ಹರಾಜಿನಲ್ಲಿ ಬಿಡ್ಡುದಾರರು ಅಥವಾ ಅವರ ಪರವಾಗಿ ಅಧಿಕಾರ ಪತ್ರ (ಜಿ.ಪಿ.ಎ.ಹೋಲ್ಡರ್) ಹೊಂದಿರುವವರು ಮಾತ್ರ ಭಾಗವಹಿಸತಕ್ಕದ್ದು.
16. ಗುತ್ತಿಗೆದಾರರು ಕಾಲಾನುಕಾಲಕ್ಕೆ ಜಾರಿಯಾಗಬಹುದಾದ ನಿಯಮಗಳಿಗೆ ಬದ್ದರಾಗಿತಕ್ಕದ್ದು.
17. ಮೇಲ್ಕಂಡ ಷರತ್ತುಗಳಲ್ಲಿ ಯಾವುದೇ ಷರತ್ತನ್ನು ರದ್ದುಪಡಿಸುವ ಹಕ್ಕನ್ನು ಜಿಲ್ಲಾಧಿಕಾರಿಗಳು ಹಾಗೂ ವೀರಸೌಧ ಕಟ್ಟಡ ಸಮಿತಿ ಅಧ್ಯಕ್ಷರು ಕಾಯ್ದಿರಿಸಿಕೊಂಡಿರುತ್ತಾರೆ.
18. ವೀರಸೌಧ ಕಟ್ಟಡ ಸಮಿತಿಯ ತೀರ್ಮಾನದಂತೆ (G-1) ಒಂದು ಮಳಿಗೆಯನ್ನು ಖಾದಿ ಮತ್ತು ಗ್ರಾಮೋದ್ಯೋಗ ವಸ್ತ್ರ ಬಂಡಾರಕ್ಕಾಗಿ ಕಾಯ್ದಿರಿಸಿರುತ್ತದೆ.

ಸಹಿ/–
ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ,
ತುಮಕೂರು.

ಸಹಿ/–
ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿ
ವೀರಸೌಧ ಕಟ್ಟಡ ಸಮಿತಿ, ತುಮಕೂರು.